ಅನುಬಂಧ-1

ಹೊರ ರಾಜ್ಯದ ಪ್ರಮುಖ ಕಂಪನಿಗಳು ದಿನನಿತ್ಯ ಕರ್ನಾಟಕದಲ್ಲಿ ಮಾರಾಟ ಮಾಡುತ್ತಿರುವ ಹಾಲಿನ ಪ್ರಮಾಣದ ವಿವರಗಳು

ಕ್ರ.ಸಂಖ್ಯೆ	ಕಂಪನಿಗಳ ಹೆಸರು	ಮಾರಾಟ ಮಾಡುವ ಹಾಲಿನ ಪ್ರಮಾಣ (ಲೀಟರ್‌ಗಳಲ್ಲಿ)
1.	ಹೆರಿಟೇಜ್	75000
2.	ಆರೋಗ್ಯ	65000
3.	ನೀಲಗಿರೀಸ್	35000
4.	ಸ್ವಸ್ಥಿಕ್	31000
5.	ದೊಡ್ಲ	21000
6.	ಕೆ.ಸಿ.ಎ.	11000
7.	ಜರ್ಸಿ	15000
8.	ಶಿವಶಕ್ತಿ	6000
9.	ತಿರುಮಲ	6000
10.	ದೂದ್ ಪಂಡರಿ	16000
11.	ಶೃತಿ	15000
12.	ನ್ಯಾಚುರಲ್ ರಿಚ್	17000
13.	ಗೋಮಾತಾ	5000
14.	ಡೈರಿ ಫ್ರೆಶ್	4500
15.	ತೇಜ	3500
16.	ಇತರೆ ಸಣ್ಣ ಕಂಪೆನಿಗಳು	70000
	ಒಟ್ಟು	396000

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಮೇಲದರ್ಜೆಗೇರಿಸುವುದು

272 (270): ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ರೇಷ್ಮೆ, ಜವಳಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಬೇಕಾಗಲು ಅಗತ್ಯವಿರುವ ಭೂ ಸ್ವಾಧೀನ ಪ್ರಕ್ರಿಯೆ ಯಾವ ಹಂತದಲ್ಲಿದೆ;

ಆ) ಈ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಬೇಕೆಂಬ ಹಲವಾರು ವರ್ಷಗಳ ಮನವಿ ಈಡೇರಲು ಇನ್ನೂ ಯಾವ ಕ್ರಮ ಕೈಗೊಳ್ಳಬೇಕಾಗಿದೆ;

ಇ) ಈ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಲು ಉಂಟಾಗಿರುವ ತೊಡಕುಗಳ ಬಗ್ಗೆ ತಿಳಿಸುವುದು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ, ಜವಳಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ಸಚಿವರು) :

ಅ) ಮತ್ತು ಆ)ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಲು ಸರ್ಕಾರವು ಬಹಳ ಉತ್ಸುಕವಾಗಿದೆ. ಈಗಿರುವ ರನ್‌ವೆ ಸಂಖ್ಯೆ:05: 23ಅನ್ನು ಎರಡು ಬದಿಯಲ್ಲಿಯೂ 100 ಮೀಟರ್ ವಿಸ್ತರಿಸಿ ಉಪಯೋಗಿಸುವ ಬಗ್ಗೆ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾದ ಹಿರಿಯ ಅಧಿಕಾರಿಗಳೊಂದಿಗೆ ಪತ್ರವ್ಯವಹಾರ ಮಾಡಲಾಗಿತ್ತು ಮತ್ತು ಈ ವಿಷಯದಲ್ಲಿ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾದ ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆಯಲ್ಲಿ ಪ್ರಸ್ತಾವಿಸಲಾಗಿತ್ತು.

ಇ) ಭಾರತ ಸರ್ಕಾರದ ನಾಗರೀಕ ವಿಮಾನಯಾನ ಸಚಿವರು ರಾಜ್ಯ ಸರ್ಕರಕ್ಕೆ ಬರೆದ ಇತ್ತೀಚಿನ ತಮ್ಮ ಪತ್ರದಲ್ಲಿ ರನ್‌ವೇ ಸಂಖ್ಯೆ : 05:23ಅನ್ನು ಸುರಕ್ಷಾತಾ ದೃಷ್ಟಿಯಿಂದ (ಒಂದು ಕಡೆ ಚಾಮುಂಡಿಬೆಟ್ಟ ಮತ್ತು ಇನ್ನೊಂದು ಕಡೆ ರೈಲ್ವೆ ಟ್ರಾಕ್ ಇರುವ ಕಾರಣ) ವಿಸ್ತರಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದಾರೆ. ಮತ್ತು ಇನ್ನೊಂದು ರನ್‌ವೇ ಆದ 09:27ಅನ್ನು ವಿಸ್ತರಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸುತ್ತಾ, ಇದಕ್ಕಾಗಿ ರಾಜ್ಯ ಸಕಾರವು 140 ಎಕರೆ ಭೂಮಿಯನ್ನು ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾಕ್ಕೆ ಹಸ್ತಾಂತರಿಸಬೇಕೆಂದು ಕೋರಿದ್ದಾರೆ. ಈ ವಿಷಯದಲ್ಲಿ ಮುಂದಿನ ಸೂಕ್ತಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಮೈಸೂರು ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಕಾರ್ಮಿಕರು

273 (272): ಶ್ರೀ ಶಂಕರಲಿಂಗೇಗೌಡ, ಹೆಚ್.ಎಸ್. (ಚಾಮರಾಜ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಲ್ಲಿ ಎಲ್ಲೆಲ್ಲಿ ಯಾವ ಯಾವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿವೆ;

ಆ) ಅವುಗಳ ಪೈಕಿ ಯಾವ ಯಾವ ಕಾರ್ಖಾನೆಗಳಲ್ಲಿ ಎಷ್ಟೆಷ್ಟು ಕಾರ್ಮಿಕರಿದ್ದಾರೆ;

ಇ) ಸದರಿ ಕಾರ್ಮಿಕರ ಪೈಕಿ ಯಾವ ಯಾವ ಕಾರ್ಖಾನೆಗಳಲ್ಲಿ ಎಷ್ಟೆಷ್ಟು ಮಂದಿ ಕನ್ನಡೇತರರು ಇರುವರು;

ಈ) ಕೈಗಾರಿಕೆ ಒಂದರಲ್ಲಿ ಕನ್ನಡಿಗರು ಕನ್ನಡೇತರರು ಇವರುಗಳ ಅನುಪಾತ ನಿಯಮಾನುಸಾರ ಎಷ್ಟಿರಬೇಕೋ ಅಷ್ಟಿದೆಯೇ ಎಂಬ ಬಗ್ಗೆ ಗಮನಿಸಲಾಗಿದೆಯೇ; ವಿವರ ನೀಡುವುದು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಮೈಸೂರು ಜಿಲ್ಲೆಯಲ್ಲಿ ಒಟ್ಟು 79 ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿದ್ದು ಅವುಗಳು ಎಲ್ಲೆಲ್ಲಿವೆ ಎಂಬ ವಿವರಗಳನ್ನೊಳಗೊಂಡ ಪಟ್ಟಿಯನ್ನು ಲಗತ್ತಿಸಿದೆ.

ಆ) ಒಟ್ಟು ಕಾರ್ಮಿಕರು 22579 ವಿವರಗಳ ಪಟ್ಟಿ ಲಗತ್ತಿಸಿದೆ.

ಇ) ಒಟ್ಟು ಕನ್ನಡಿಗರು 20710 ಒಟ್ಟು ಕನ್ನಡೇತರರು 1869 ವಿವರಗಳನ್ನೊಳಗೊಂಡ ಪಟ್ಟಿ ಲಗತ್ತಿಸಿದೆ.

ಈ) ಸರ್ಕಾರಿ ಆದೇಶ ಸಂಖ್ಯೆ ಸಿಇ 45 ಐ.ಎಪಿ 90 ದಿನಾಂಕ 18–1–91 ಪ್ರಕಾರ ಸಿ ಮತ್ತು ಡಿ ಕ್ಯಾಟಗರಿಯಲ್ಲಿ ಶೇ. 100 ರಷ್ಟು ಕನ್ನಡಿಗರು ಇರಬೇಕು. ಒಟ್ಟು ಕಾರ್ಮಿಕರಲ್ಲಿ ಶೇ. 80 ರಷ್ಟು ಕನ್ನಡಿಗರು ಇರಬೇಕು ಎಂಬ ನಿಯಮವಿದೆ. ಈ ನಿಯಮ ಅನುಸರಣೆ ಕುರಿತು ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಗಳಲ್ಲಿ ಪರಿಶೀಲಿಸಲಾಗುತ್ತಿದೆ.